**ದಿನಾಂಕಃ 12–06–2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ನೇ ಎದುರುದಾರರ ರರ ಪರ ಶ್ರೀ ಎಂ. ಎನ್. ಎಂ. ವಕೀಲರಿಂದಃ**

1 ನೇ ಎದುರುದಾರನಿಗೆ ಎಲ್ಲಾ ದಾಖಲೆಗಳನು ಕಾನೂನುಬದ್ಧವಾಗಿ ಇರುವುದರಿಂದ ಪರಿಹಾರ ಕೊಡಲು ಬಾಧ್ಯಸ್ಥನಲ್ಲವೆಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ನೇ ಎದುರುದಾರರ ರರ ಪರ ಶ್ರೀ ಎನ್.ಡಿ. ವಕೀಲರಿಂದಃ**

ನಾನು 10 ನೇ ತರಗತಿಯವರೆಗೆ ಓದಿದ್ದೇನೆ. ನನಗೆ ಈಗ 26 ವರ್ಷ. ನನ್ನ ಜನ್ಮ ದಿನಾಂಕಃ 10–03–1999. ಅದರ ಬಗ್ಗೆ ಆಧಾರ ಕಾರ್ಡ ಹಾಜರು ಪಡಿಸಿದ್ದೇನೆ. ಎದುರುದಾರ ಲಾರಿ ಮಾಲಕ 16000/– ರೂಪಾಯಿ ಸಂಬಳ ಮತ್ತು ಪ್ರತಿದಿನ 240/– ರೂಪಾಯಿ ಭತ್ಯೆ ಕೊಡುತ್ತಿದ್ದರು ಎಂದು ತೋರಿಸಲು ದಾಖಲೆಗಳನ್ನು ಹಾಜರು ಪಡಿಸಿಲ್ಲವೆಂದರೆ ಸರಿ. ನಾನು ಎದುರುದಾರನ ಬಳಿ ಯಾವುದೇ ಕೆಲಸ ಮಾಡುತ್ತಿರಲಿಲ್ಲವಾದರೂ ಸಹ ಪರಿಹಾರ ಪಡೆಯಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕಾರ್ಮಿಕ ಮತ್ತು ಮಾಲೀಕ ಎಂದು ತೋರಿಸಲು ದಾಖಲೆ ಹಾಜರು ಪಡಿಸಿಲ್ಲವೆಂದರೆ ಸರಿ.

2. ಅಪಘಾತವು ರೈಲ್ವೆ ಅಂಡರ್ ಪಾಸ್ ಆಗಿದೆ ಎಂದರೆ ಸರಿ. ಆ ಸಮಯದಲ್ಲಿ ನಾನು ಗಾಡಿಯ ಕ್ಯಾಬಿನ್ ಮೇಲೆ ಕುಳಿತ್ತಿದ್ದೆ ಎಂದರೆ ಸರಿಯಲ್ಲ. ಹಿಂದೆ ಚೀಲದ ಮೇಲೆ ಕುಳಿತಿದ್ದೆ. ತರಕಾರಿ ಚೀಲಗಳ ಮೇಲೆ ನಾನು ಕುಳಿತಿದ್ದೆ ಎಂದರೆ ಸರಿ. ಚಾಲಕನ ಬಳಿ ಒಂದು ಕ್ಲೀನರ್ ಆಸನ ಇರುತ್ತದೆ ಎಂದರೆ ಸರಿ. ಕ್ಲೀನರ್ ಅದೇ ಜಾಗದಲ್ಲಿ ಕುಳಿತುಕೊಳ್ಳಬೇಕು ಎಂದರೆ ಸರಿ. ನಾನು ಆ ದಿನ ಕ್ಲೀನರ್ ಎಂದು ಕೆಲಸ ಮಾಡುತ್ತಿರಲಿಲ್ಲ, ಅನಧಿಕೃತ ಪ್ರಯಾಣಿಕನೆಂದು ತರಕಾರಿ ಚೀಲಗಳ ಮೇಲೆ ಕುಳಿತಿದ್ದೆ ಎಂದರೆ ಸರಿಯಲ್ಲ. ನಾನು ಆ ರೀತಿ ಕುಳಿತಿದ್ದರಿಂದ ಆಯ ತಪ್ಪಿ ಬಿದ್ದು ಗಾಯ ಮಾಡಿಕೊಂಡಿದ್ದೇನೆ ಅದಕ್ಕೆ 2 ನೇ ಎದುರುದಾರ ಪರಿಹಾರ ಕೊಡಲು ಬಾಧ್ಯಸ್ಥರಲ್ಲವೆಂದರೆ ಸರಿಯಲ್ಲ.

3. ಅಪಘಾತವಾದ ಮೇಲೆ ಬ್ಯಾಡಗಿ ಆಸ್ಪತ್ರೆಗೆ ಹೋದೆ. ಅವರು ತುರ್ತು ಚಿಕಿತ್ಸೆ ನೀಡಿ ತಕ್ಷಣವೇ ಹಾವೇರಿ ಆಸ್ಪತ್ರೆಗೆ ಕಳುಹಿಸಿದರು. ಹಾವೇರಿ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿ ಹುಬ್ಬಳ್ಳಿಗೆ ಕಳುಹಿಸಿದರು. ಹುಬ್ಬಳ್ಳಿ ಆಸ್ಪತ್ರೆಯಲ್ಲಿ 8 ದಿವಸ ಇದ್ದೆ. ಅಲ್ಲಿ ಏನು ಚಿಕಿತ್ಸೆ ಕೊಟ್ಟಿರು ಎಂದು ನೆನಪಿಲ್ಲ. ಆ ನಂತರ ಹಾವೇರಿಯ ದೊಡ್ಡಮನಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇನೆ. ಸದರಿ ಆಸ್ಪತ್ರೆಯಲ್ಲಿ 15–20 ದಿನಗಳವರೆಗೆ ಇದ್ದೆ. ಹಾವೇರಿಯಲ್ಲಿರುವ ದೊಡ್ಡಮನಿ ವೈದ್ಯರು ಮೂಳೆ ತಜ್ಞರು ಎಂದರೆ ಸರಿ. ಅವರು ಶಿಕುರು ಆಸ್ಪತ್ರೆಯಲ್ಲಿ ಇರುತ್ತಾರೆ ವಾರಕ್ಕೊಮ್ಮೆ ಹಾವೇರಿ ಆಸ್ಪತ್ರೆಗೆ ಸಂದರ್ಶನ ಮಾಡಿ ಚಿಕಿತ್ಸೆ ಕೊಡುತ್ತಾರೆ. ಹಾವೇರಿಯ ಆಸ್ಪತ್ರೆಯಲ್ಲಿ ಗ್ಲುಕೋಸ್ ಏರಿಸಿ ಇಂಜೆಕ್ಷನ್ ಮತ್ತು ಮಾತ್ರೆ ಕೊಟ್ಟರು. ಶಿಕುರ ಆಸ್ಪತ್ರೆಯಲ್ಲಿ ನನ್ನ ತಲೆಯ ಹಿಂಭಾಗಕ್ಕೆ ಶಸ್ತ್ರ ಚಿಕಿತ್ಸೆ ಮಾಡಿದ್ದಾರೆ. ಅಪಘಾತದಿಂದ ನನ್ನ ತಲೆಗೆ ಗಾಯವಾಗಿಲ್ಲ, ಆದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ಆಸ್ಪತ್ರೆಗಳನ್ನು ಹೊರತುಪಡಿಸಿ ದಾವಣಗೆರೆಯ ಎಸ್. ಎಸ್. ಆಸ್ಪತ್ರೆಯಲ್ಲಿ 5–6 ಬಾರಿ ತೋರಿಸಿದ್ದೇನೆ. ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಹಾಜರು ಪಡಿಸಿದ್ದೇನೆ. ನಾನು ಯಾವುದೇ ದಾಖಲೆಗಳನ್ನು ಹಾಜರು ಪಡಿಸದೇ ಇದ್ದರೂ ಸಹ ಹಾಜರು ಪಡಿಸಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶಿಕುರ ಆಸ್ಪತ್ರೆಯಲ್ಲಿ ಹಾಗೂ ಹಾವೇರಿಯ ದೊಡ್ಡಮನಿ ಆಸ್ಪತ್ರೆಯಲ್ಲಿ ಅಂಗ ನ್ಯೂನ್ಯತೆ ಪ್ರಮಾಣ ಪತ್ರಗಳನ್ನು ಕೊಡಲು ಕೇಳಿದೆ ಆದರೆ ಅವರು ನ್ಯಾಯಾಲಯಕ್ಕೆ ಬರುವುದು ಆಗುವುದಿಲ್ಲವೆಂದು, ರೋಗಿಗಳು ಇರುತ್ತಾರೆ ಎಂದು ಹೇಳಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ದಾಖಲೆಗಳನ್ನು ಹಾಜರು ಪಡಿಸಿಲ್ಲ. ನನಗೆ ಯಾವುದೇ ಅಂಗ ನ್ಯೂನ್ಯತೆ ಇಲ್ಲವಾದ ಕಾರಣ ಸದರಿ ಆಸ್ಪತ್ರೆಯವರು ಪ್ರಮಾಣ ಪತ್ರ ಕೊಟ್ಟಿಲ್ಲ. ಆದ್ದರಿಂದ ನಾನು ಎಸ್. ಎಸ್. ಆಸ್ಪತ್ರೆಯ ಡಾ. ನಿತೀನ್ ಅವರಿಂದ ಸುಳ್ಳು ಪ್ರಮಾಣ ಪತ್ರ ತಂದಿದ್ದೇನೆ ಎಂದರೆ ಸರಿಯಲ್ಲ.

4. ನನ್ನ ಅರ್ಜಿ ಮತ್ತು ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿನ ಸಂಗತಿಗಳನ್ನು ತಿಳಿದುಕೊಂಡಿದ್ದೇನೆ. ಪೋಲಿಸರು ಹಾಕಿದ ಅಂತಿಮ ವರದಿಯನ್ನು ತಿಳಿದುಕೊಂಡಿರುವಿರಾ ಎಂದು ಕೇಳಿದ್ದಕ್ಕೆ ಸಾಕ್ಷಿ ನಾನು ಆಸ್ಪತ್ರೆಯಲ್ಲಿದ್ದೆ ನನ್ನ ದೊಡ್ಡಪ್ಪ ದೂರು ಕೊಟ್ಟಿದ್ದಾರೆ ಎಂದು ಉತ್ತರಿಸಿದ್ದಾರೆ. ನನಗೆ ಶಸ್ತ್ರ ಚಿಕಿತ್ಸೆ ಆಗಿದೆ ಎಂದು ಅಂಗ ನ್ಯೂನ್ಯತೆ ಪ್ರಮಾಣ ಪತ್ರ ತಂದಿದ್ದೇನೆ. ನನಗೆ ಯಾವುದೇ ಅಂಗ ನ್ಯೂನ್ಯತೆ ಆಗದಿದ್ದರೂ ಸಹ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ನಾನು ಆಸ್ಪತ್ರೆಯಲ್ಲಿ 2 ತಿಂಗಳ ಇದ್ದೆ ಅದಕ್ಕೆ 2,40,000/- ರೂಪಾಯಿ ಖರ್ಚು ಮಾಡಿದ್ದೇನೆಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವ ಔಷಧಿ ಚೀಟಿಗಳನ್ನು ಯಾರು ಬರೆದಿದ್ದಾರೆ ಎಂದು ನಮೂದಿಸಿಲ್ಲ, ಅವರ ಸಹಿ ಇಲ್ಲ ಅವುಗಳನ್ನು ಸೃಷ್ಟಿಸಿ ತಂದಿದ್ದೇನೆ ಎಂದರೆ ಸರಿಯಲ್ಲ. ಔಷಧಿ ಬಿಲ್ಲುಗಳಲ್ಲಿ ಹಣ ಪಾವತಿ ಮಾಡಲಾಗಿದೆ ಎಂದು ತೋರಿಸಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಹಣ ಪಾವತಿ ಮಾಡದಿದ್ದರು ಸಹ ಸೃಷ್ಟಿಸಿ ತಂದಿದ್ದೇನೆ ಎಂದರೆ ಸರಿಯಲ್ಲ. ಹೆಚ್ಚುವರಿ ಚಿಕಿತ್ಸೆಗೆ 1,50,000/- ರೂಪಾಯಿ ಬೇಕೆಂದು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲವೆಂದರೆ ಸರಿ. ನಾನು ಸದರಿ ಗಾಡಿಯಲ್ಲಿ ಕ್ಲಿನರ್ ಎಂದು ಇರಲಿಲ್ಲ, ಆದರೂ ಸಹ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಎದುರುದಾರರು ಯಾವುದೇ ರೀತಿಯಿಂದ ಪರಿಹಾರ ಕೊಡಲು ಬಾಧ್ಯಸ್ಥರಲ್ಲವೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ.

ದಿನಾಂಕಃ 12-06-2026.

Sd/-

ಹಿರಿಯ ಸಿ ಜೆ ಮತ್ತು ಜೆ. ಎಂ.ಎಫ್. ಸಿ

ಹಿರೇಕೆರೂರು